

ಕುಂದಾದ್ರಿ



ಒನಕೆ ಅಬ್ಬಿ ಜಲಪಾತಕ್ಕೆ ಹೋಗುವ ಹಾದಿಯಲ್ಲಿ

ಲಕ್ಷಣಗಳನ್ನು ತಿಳಿಸಿ ಕೊಡುವುದು ನನ್ನ ಪ್ರಮುಖ ಕೆಲಸವಾಗಿತ್ತು.

ಮೆಜೆಸ್ಟಿಕ್‌ನಿಂದ ಹೊರಟು ಮುಂದೆ ಗೊರಗುಂಟೆಪಾಳ್ಯದ ಹತ್ತಿರ ಎರಡನೇ ಪಿಕ್ ಅಪ್ ಪಾಯಿಂಟ್ ಎಂದು ನಿಕ್ಕಿಯಾಗಿತ್ತು. ಪ್ರವಾಸಕ್ಕೆ ನೋಂದಣಿ ಮಾಡಿಕೊಂಡಿದ್ದ ಆಗಷ್ಟೇ ಪರಿಚಯವಾದ ಮತ್ತಿಬ್ಬರೊಟ್ಟಿಗೆ ಗಾಡಿ ಹತ್ತಿದೆ. **Mystic Wild**ನ ಕಾರ್ತಿಕ್ ಬಿಟ್ಟರೆ ಹಳೆ ಪರಿಚಯವಿದ್ದುದು ಬ್ರಹ್ಮಗಿರಿ ಚಾರಣಕ್ಕೆ ಬಂದಿದ್ದ ಸ್ವಾತಿ ಚಂದ್ರ ಮಾತ್ರ. ನಾವು ಗಾಡಿ ಹತ್ತುವ ವೇಳೆಗಾಗಲೇ ಕೆಲವರು ಬೆಂಗಳೂರಿನ ಗದ್ದಲಕ್ಕೆ ಗೋಲಿ ಹೊಡೆದು ಗಾಢ ನಿದ್ರೆಗೆ ಜಾರಿದ್ದರು.

ನೆಲಮಂಗಲ ದಾಟಿದ ಮೇಲೆ ಆಗುಂಬೆಗೆ ಸರಿ ಸುಮಾರು 6 ಘಂಟೆಯ ಪ್ರಯಾಣ. ಕಾರ್ತಿಕ್ ಮತ್ತು ನಾನು ಮೂರು ದಿನದ ಮಟ್ಟಿಗೆ ಹಾಕಿದ್ದ ಯೋಜನೆಯ ವಿಚಾರ ಚರ್ಚಿಸಿ ಮುಗಿಸುವಷ್ಟರಲ್ಲಿ ತಿಪಟೂರು ತಲುಪಿದ್ದೆವು. ಪ್ರಯಾಣ ಮುಂದುವರೆಯಿತು. ತಲೆ ಆನಿಸಿದಾಗ ಕಣ್ಣು ಮುಚ್ಚಿಕೊಂಡವು. ಎಚ್ಚರವಾಗಿದ್ದು ಆಗುಂಬೆ ಸಮೀಪಕ್ಕೆ. ಕಣ್ತೆರೆದರೆ ಜಿನುಗುತಿದ್ದ ಮಳೆಯಲ್ಲಿ ಮಿಂದ ಮಲೆನಾಡ ಸೌಂದರ್ಯ! **Hingaara** ಹೋಂಸ್ಟೇಯಲ್ಲಿ ಇಳಿದಾಗ ನಮ್ಮ ತಂಡಕ್ಕಾಗಿಯೇ ಹೊಸದಾಗಿ ಟೆಂಟ್‌ಗಳ ವ್ಯವಸ್ಥೆಯಾಗಿತ್ತು.

## ಮೊದಲ ದಿನ..

ಸಮಯ 10.30. ತಂಡದ ಸದಸ್ಯರಲ್ಲಿ ಒಬ್ಬರು ಗೇಮಿಂಗ್ ಪ್ರೊಫೆಶನಲ್ ಮತ್ತೊಬ್ಬ ಡಾಟಾ ಸೈಂಟಿಸ್ಟ್, ಇನ್ನೊಬ್ಬರು ವಕೀಲ ಹೀಗೆ ಒಂದಕ್ಕಿನ್ನೊಂದು ಸಂಬಂಧವಿಲ್ಲದಂತಹ ವೃತ್ತಿಯವರು ಇಲ್ಲಿ ಜೊತೆಯಾಗಿದ್ದರು. ನಗರದ ವೇಗಕ್ಕೆ ಒಗ್ಗಿದವರಿಗೆ ಇಲ್ಲಿ ಕಾಲವೇ ನಿಂತಂತೆ ಅನಿಸುತಿತ್ತು. ಮಿಸ್ಟಿಕ್ ವೈಲ್ಡ್ ನ ಪರಿಚಯದ ಸುತ್ತು ಸಾಮಾನ್ಯವಾಗಿ ತಮಾಷೆಯ ಜೊತೆಗೆ ಜಿಜ್ಞಾಸೆ ಮೂಡಿಸುವಂತಹದ್ದು. ಇಲ್ಲಿ ಆದದ್ದು ಅದೇ. ಭಾಗವಹಿಸಿದ್ದವರೆಲ್ಲ **wildlife, ecology** ಎಂದು ಮಾತನಾಡಲು ಪ್ರಾರಂಭಿಸಿದ್ದರು.

ಎಲ್ಲರೂ ಅದೇ ಮನಸ್ಥಿತಿಯಲ್ಲಿರುವಾಗ ಪಶ್ಚಿಮ ಘಟ್ಟಗಳ ಸೃಷ್ಟಿಯ ಹಿನ್ನೆಲೆ, ಜೀವ ವೈವಿಧ್ಯ, ಸ್ಥಳೀಯ ಪ್ರಾಣಿ ಪಕ್ಷಿಗಳ ಹಾಗೂ ಅವುಗಳ ಸಂರಕ್ಷಣೆಯ ಬಗ್ಗೆ ಕಿರು ಚಿತ್ರಣವನ್ನು **slide**ಗಳ ಮೂಲಕ ವಿವರಿಸಿ, ಮಲೆನಾಡ ಕುರಿತು ಸಾಕ್ಷ್ಯಚಿತ್ರವೊಂದನ್ನು ಪ್ರದರ್ಶಿಸಿದೆವು.

ಉಲ್ಲಸಿತವಾಗಿದ್ದ ತಂಡ, ಊಟದ ನಂತರ ಟೆಂಟ್ ಎದುರು ಕುಳಿತು ಪಕ್ಷಿಗಳನ್ನು ವೀಕ್ಷಿಸಲು ಬೈನಾಕುಲರ್ಸ್ ಕಣ್ಣಿಗೇರಿಸಿಕೊಂಡಿತು. ಕಾಣುತ್ತಿದ್ದ ಮತ್ತು ದೂರದಲ್ಲಿ ಕೇಳಿಸುತಿದ್ದ ಪಕ್ಷಿಗಳ ಬಗ್ಗೆ ತಿಳಿದುದನ್ನು ವಿವರಿಸಿದರು. ಅದರ ಬಗ್ಗೆ ಇದ್ದ ಮಾಹಿತಿಗಳನ್ನು ಹಂಚಿಕೊಂಡರು. ಒಂದಷ್ಟು ಸಮಯ ಬಾನಾಡಿಗಳ ಲೋಕದಲ್ಲಿ ವಿಹರಿಸಿದೆವು.

## ಮಲಬಾರ್ ಟ್ರೋಗನ್

ಪಶ್ಚಿಮ ಘಟ್ಟಗಳಿಗೆ **(Endemic)** ಸ್ಥಳೀಯ ಪಕ್ಷಿ! ನಾವು ತಂಗಿದ್ದ